# ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ಕಲಘಟಗಿ

**ಸಿಸಿ ನಂ 223/2024**

**ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 19-02-2026 ರಂದು ಪ್ರಮಾಣ ಮಾಡಿಸಲಾಯಿತು**

| | | | |
|---|---|---|---|
| **ಸಾಕ್ಷಿಯ ಹೆಸರು** | ಃ ರೇಣುಕಾ ಮೂಲಿಮನಿ | | **ಪ್ರಾ.ಸಾ ಃ 01** |
| **ತಂದೆ ಃ ಗಂಡ ಹೆಸರು** | ಃ ಪರಶುರಾಮ | | **ಚಾ.ಸಾ ಃ 01** |
| **ವಯಸ್ಸು** | ಃ 40 ವರ್ಷ | | |
| **ಉದ್ಯೋಗ** | ಃ ಮನೆ ಗೆಲಸ | | |
| **ವಾಸಸ್ಥಳ** | ಃ ತುಮರಿಕೊಪ್ಪ | | |

**ಮುಖ್ಯ ವಿಚಾರಣೆ ಃ ಮಾನ್ಯ ಸ.ಸ.ಅ. ರವರಿಂದಃ**

ನನಗೆ ಚಾಸಾ-2 ರಿಂದ 15 ರವರ ಪರಿಚಯ ಇದೆ. ನನಗೆ ಆರೋಪಿತರ ಪರಿಚಯ ಇದೆ.

ಸುಮಾರು ಎರಡುವರೆ ವರ್ಷಗಳ ಹಿಂದೆ ಹೋಳಿ ಹುಣ್ಣಿಮೆ ದಿನದಂದು ಓಕಳಿ ಆಡುವ ದಿನದಂದು ನಮ್ಮ ಓಣಿಯಲ್ಲಿ ಬಾಜು ಓಣಿಯು ಆರೋಪಿತರು ಬಣ್ಣ ಆಡುತ್ತಾ ನಮ್ಮ ಓಣಿಯಲ್ಲಿ ಬಂದಿದ್ದರು. ಬಣ್ಣ ಆಡುತ್ತಾ ನಮ್ಮ ಓಣಿ ದಾಟಿ ಹೋಗಿರುತ್ತಾರೆ. ಚಾಸಾ-4 ಹಾಗೂ ಆರೋಪಿತರ ಮಧ ಜಗಳ ಆಗಿದ್ದು ಚಾಸಾ-4 ರವರು ಮರಳಿ ನಮ್ಮ ಓಣಿಗೆ ಬಂದಿರುತ್ತಾರೆ. ಆಗ ಆರೋಪಿತರು ಪುನಃ ಮರಳಿ ಚಾಸಾ-4 ರವರ ಜೊತೆ ಜಗಳ ಮಾಡಲು ಅವರ ಮನೆ ಹತ್ತಿರ ಬಂದಿರುತ್ತಾರೆ. ಚಾಸಾ-12 ರವರು ಕಲ್ಲಪ್ಪ ಕಟ್ಟಿಮನಿ ಎನ್ನುವವರ ಅಂಗಡಿ ಮುಂದೆ ಕುಳಿತಿದ್ದರು. ಆಗ ಆರೋಪಿತರು ಚಾಸಾ-4 ರವರ ಮೇಲೆ ಹಲ್ಲೆ ಮಾಡುತ್ತಿದ್ದಾಗ ಚಾಸಾ-12 ರವರು ವಿಚಾರಿಸಲು ಹೋಗಿದ್ದು ಆರೋಪಿತರು ಅವರ ಮಾತನ್ನು ಕೇಳದೆ ಜಗಳ ಮಾಡುತ್ತಿದ್ದರು. ಆರೋಪಿತರು ಬಡಿಗೆ ಹಿಡಿದು ಜಗಳ ಮಾಡುತ್ತಿದ್ದರು. ಚಾಸಾ-12 ರವರು ಜಗಳ ಬಿಡಿಸಲು ಹೋದಾಗ ಆರೋಪಿತರು ಹೊಡೆಯುತ್ತಿದ್ದರು. ಆಗ ನಾನು, ನನ್ನ ಮಕ್ಕಳು ಎಲ್ಲರೂ ಸೇರಿಕೊಂಡು ಜಗಳ ಬಿಡಿಸಲು ಹೋಗಿರುತ್ತೇವೆ. ಆರೋಪಿತರು ಜಗಳ ಮಾಡುತ್ತಾ ಚರ್ಚವರೆಗೆ ಬಂದಿರುತ್ತಾರೆ. ಚರ್ಚ ಹತ್ತಿರ ಚಿಕ್ಕದಾದ ದಾರಿ ಇದ್ದು ಅಲ್ಲಿ ಹಿರಿಯರಾದ ಚಾಸಾ-2, 3, 7 ರಿಂದ 9 ರವರು ಬಿಡಿಸುವಾಗ ಆರೋಪಿತರು ಕಲ್ಲು ಬಡಿಗೆ ಹಿಡಿದುಕೊಂಡು ಚಿರಾಡುತ್ತಿದ್ದರು. 1 ನೇ ಆರೋಪಿಯು ಕಲ್ಲಿನಿಂದ ಚಾಸಾ-8 ರವರ ತಲೆಗೆ ಹೊಡೆದು ರಕ್ತಗಾಯ ಪಡಿಸಿರುತ್ತಾನೆ. ನಾನು ಜಗಳ ಬಿಡಿಸುತ್ತಿದ್ದು ಆರೋಪಿತರು ಕಲ್ಲು ಕಟ್ಟಿಗೆ ತೊರಾಡಿದ್ದರಿಂದ ನಮಗೂ ಹೊಡಿತಾ ಬಿದ್ದಿರುತ್ತವೆ. ಚಾಸಾ-5 ರವರ ಎಡಗಾಲಿಗೆ ಕಲ್ಲಿನಿಂದ ಹೊಡೆದಿದ್ದರಿಂದ ರಕ್ತಗಾಯವಾಗಿರುತ್ತದೆ. ನಾನು ಚಾಸಾ-5 ರವರನ್ನು ಕರೆದುಕೂಂಡು ಬರಲು ಹೋದಾಗ 1 ನೇ ಅರೋಪಿ ಹಾಗೂ ಇತರರು ಬಂದು ನನ್ನನ್ನು ಈ ಜಗಳಕ್ಕೆ ಏನು ಸಂಬಂಧ ಎಂದು ಜಗ್ಗಾಡಿರುತ್ತಾರೆ. ನಾನು ಗಟಾರಿನಲ್ಲಿ ಕಳಗೆ ಬಿದ್ದಿದ್ದು ಚಾಸಾ-8 ರವರು ನನ್ನನ್ನು ಎಬ್ಬಿಸಲು ಬಂದಾಗ ಅವರ ತಲೆಗೆ ಕಲ್ಲಿನಿಂದ ಹೊಡೆದ ರಕ್ತಗಾಯವಾಗಿರುತ್ತದೆ. ಆರೋಪಿತರು ನಮಗೆ ಹೊಲಸು ಹೊಲಸು ಬೈದಿರುತ್ತಾರೆ. ಈಗ ಹಿರಿಯರು ಬಂದಿದ್ದರಿಂದ ಉಳಿದುಕೂಂಡಿದ್ದಿರಿ ಎಂದು ಜೀವ ಬೆದರಿಕೆ ಹಾಕಿರುತ್ತಾರೆ. ಜಗಳದಲ್ಲಿ ಚಾಸಾ-6, 9 ರವರಿಗೂ ಕೂಡಾ ಗಾಯಗಳಾಗಿರುತ್ತವೆ. ನಾವು ಎಲ್ಲರೂ ಸೇರಿಕೊಂಡು ಕಲಘಟಗಿ ಸರಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದುಕೊಂಡು ನಂತರ ಪೋಲೀಸರ ಮುಂದೆ ದೂರು

ನೀಡಿರುತ್ತೇನೆ. ನಾನು ನೀಡಿದ ದೂರನ್ನು ನೋಡಿದರೆ ಗುರುತಿಸುತ್ತೇನೆ. . ದೂರನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ. ಅದನ್ನು ನಿಪಿ-1, ಸಾಕ್ಷಿ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನನಗೆ ಬರೆಯಲು ಬರುವುದಿಲ್ಲ. ಚಾಸಾ-13 ರವರು ನಿಪಿ-1 ನ್ನು ಬರೆದಿರುತ್ತಾರೆ.

ಜಗಳ ಆದ ಮರುದಿನ ಪೋಲೀಸರು ಜಗಳ ಆದ ಸ್ಥಳದಲ್ಲಿ ಚರ್ಚ ರಸ್ತೆ ಹತ್ತಿರ ಬಂದು ಪಂಚನಾಮೆ ಜರುಗಿಸಿರುತ್ತಾರೆ. ಆ ಸಮಯದಲ್ಲಿ ಚಾಸಾ-2 ಮತ್ತು 3 ರವರು ಹಾಜರಿದ್ದರು. ಪಂಚನಾಮೆ ಜರುಗಿಸಿ ಈಗ ನ್ಯಾಯಾಲಯದ ಮುಂದೆ ಇರುವ 8 ಬಿದಿರಿನ ಬಡಿಗೆಗಳನ್ನು ನೋಡಿ ಸಾಕ್ಷಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಮುದ್ದೆಮಾಲು-1 ಎಂದು ಗುರುತಿಸಲಾಯಿತು. ಹಲ್ಲೆಗೆ ಉಪಯೋಗಿಸಿದ ಕಲ್ಲುಗಳನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದೆ ಇರುವ ಒಂದು ಚಿಕ್ಕ ಹಾಗೂ ದೊಡ್ಡಗಾತ್ರದ ಕಲ್ಲುಗಳನ್ನು ನೋಡಿ ಸಾಕ್ಷಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಮುದ್ದೆಮಾಲು-2 ಎಂದು ಗುರುತಿಸಲಾಯಿತು. ಪಂಚನಾಮೆ ಸಮಯದಲ್ಲಿ ಪೋಟೋ ತೆಗೆದಿರುತ್ತಾರೆ. ಅವುಗಳನ್ನು ನಿಪಿ-3 ಎಂದು ಗುರುತಿಸಲಾಯಿತು, ಬೆಳಿಗ್ಗೆ 10-30 ರಿಂದ 11-00 ಗಂಟೆ ಸಮಯದಲ್ಲಿ ಪಂಚನಾಮೆ ಜರುಗಿಸಿರುತ್ತಾರೆ. ಪಂಚನಾಮೆ ಸಮಯದಲ್ಲಿ ನಾನು ಹಾಗೂ ಹಿರಿಯರು ಇದ್ದೆವು. ನಾನು ಜಾಗವನ್ನು ತೋರಿಸಿರುತ್ತೇನೆ.

***(ಮಾನ್ಯ ಸ.ಸ.ಅ ಯವರ ವಿನಂತಿ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ,*** ಪಾಟೀ ಸವಾಲಿಗೆ ಅನುಮತಿಸಿದೆ)

**ಪಾಟೀ ಸವಾಲುಃ ಮಾನ್ಯ ಸ.ಸ.ಅ. ರವರಿಂದಃ**

ಘಟನೆ ದಿನಾಂಕ 07.03.2023 ರಂದು ಸಾಯಂಕಾಲ 6-30 ಕ್ಕೆ ಆಗಿರುತ್ತದೆ ಅಂದರೆ ನಿಜ. ಚಾಸಾ-4 ರಿಂದ 15 ರವರು ಜಗಳ ಬಿಡಿಸಲು ಬಂದಿದ್ದರು ಅಂದರೆ ನಿಜ. ಚಾಸಾ-8 ರವರು ಎಲ್ಲರೂ ಸೇರಿ ಊರಲ್ಲಿ ಬಗೆ ಹರಿಸಿಕೊಳ್ಳೋಣ ಎಂದು ಬುದ್ದಿವಾದ ಹೇಳಲು ಹೋಗಿದ್ದರು ಅಂದರೆ ನಿಜ. ಆ ಸಮಯದಲ್ಲಿ 1 ನೇ ಆರೋಪಿ ಚಾಸಾ-8 ರವರಿಗೆ ನಿನಗೆ ಸೊಕ್ಕು ಬಹಳ ಇದೆ ಸೂಳೆಮಗನೆ ಎಂದು ತನ್ನ ಕೈಯಲ್ಲಿದ್ದ ಕಲ್ಲಿನಿಂದ ಎದೆಗೆ ಹೊಡೆದಿರುತ್ತಾನೆ ಅಂದರೆ ನಿಜ. 2 ನೇ ಆರೋಪಿ ಜಗಳ ಬಿಡಿಸಲು ಬಂದ ಚಾಸಾ-5 ರವರಿಗೆ ಕಲ್ಲಿನಿಂದ ಕಾಲಿಗೆ ಹೊಡೆದು ರಕ್ತಗಾಯ ಪಡಿಸಿರುತ್ತಾನೆ ಅಂದರೆ ನಿಜ. ಚಾಸಾ-6 ರವರ ತಲೆಗೆ 2 ನೇ ಆರೋಪಿ ಕಲ್ಲಿನಿಂದ ತಲೆಗೆ ಹೊಡೆದು ರಕ್ತಗಾಯ ಪಡಿಸಿರುತ್ತಾನೆ ಅಂದರೆ ನಿಜ. ಉಳಿದ ಆರೋಪಿತರು ತಮ್ಮ ಕೈಗಳಿಂದ ಹೊಡಿ ಬಡಿ ಮಾಡಿರುತ್ತಾರೆ ಅಂದರೆ ನಿಜ. 2 ನೇ ಆರೋಪಿ ನನ್ನ ಸೀರೆ ಹಿಡಿದು ಎಳೆದಾಡಿ ಸಾರ್ವಜನಿಕವಾಗಿ ಮಾನಭಂಗ ಮಾಡಿರುತ್ತಾನೆ ಹಾಗೂ ಅವಾಚ್ಯ ಶಬ್ದಗಳಿಂದ ಬೈದಿರುತ್ತಾನೆ ಅಂದರೆ ನಿಜ.

ದಿನಾಂಕ 08.03.2023 ರಂದು ಬೆಳಿಗ್ಗೆ 10-00 ರಿಂದ 11-00 ಗಂಟೆವರೆಗೆ ಪೋಲೀಸರು ಪಂಚನಾಮೆ ಜರುಗಿಸಿರುತ್ತಾರೆ ಅಂದರೆ ನಿಜ. ನಾನು ಹಾಜರ ಪಡಿಸಿದ ಮುದ್ದೆಮಾಲುಗಳನ್ನು ಪೋಲೀಸರು ಜಪ್ತಿ ಪಡಿಸಿಕೊಂಡಿದ್ದಾರೆ ಅಂದರೆ ನಿಜ. ನಮ್ಮ ಜೊತೆಗೆ ಜಗಳ ಮಾಡಿದ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದೆ ಇರುವ 1 ರಿಂದ 9 ನೇ ಆರೋಪಿತರನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲುಃ ಆರೋಪಿತರ ಪರಃ</u>**

ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೆ ಸರಿ ಇದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು,**
**ಕಲಘಟಗಿ.**